1	3
30. Karnataka Minerals & Manufacturing Company.	Hosadurga
31. Southern Organo Chemicals Ltd.,	Nanjangud

Following Cases were furnished by BIFR.

1. The Modern Mills Ltd., Bombay	...
2. Magnesium Products Ltd.,	Bangalore
3. Jaira dass Udyog Ltd.,	Bangalore
4. Metal Box India Limited.	...

ಗಮನ ಸೆಳೆಯುವ ಸೂಚನೆಗಳು

(1) ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಸೇಂದಿ ಮಾರಾಟವನ್ನು ಜುಲೈ ಒಂದರಿಂದ ನಿಷೇಧಿಸಿರುವುದರಿಂದ ಸಾವಿರಾರು ಉದ್ಯೋಗಿಗಳಿಗೆ ತೊಂದರೆಯಾಗುವ ಬಗ್ಗೆ

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಾನು ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಸೇಂದಿ ಮಾರಾಟವನ್ನು ಜುಲೈ ಒಂದರಿಂದ ನಿಷೇಧಿಸಿರುವುದರಿಂದ ಸಾವಿರಾರು ಉದ್ಯೋಗಿಗಳಿಗೆ ತೊಂದರೆ ಉಂಟಾಗುವ ಬಗ್ಗೆ ಮಾನ್ಯ ಅಬ್ಕಾರಿ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ. ಬಿ. ಇನಾಂದಾರ್ (ಅಬ್ಕಾರಿ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ನಾನು ಕೆಳಕಂಡ ಹೇಳಿಕೆಯನ್ನು ಕೊಡಲು ತಮ್ಮ ಅನುಮತಿಯನ್ನು ಕೋರುತ್ತೇನೆ. The need to impost a ban on the sale of toddy in the State has been the subject of several representations received by the Government as well as similar suggestions from time to time. The main objective of this measure is to safe-guard the health and well-being of the weaker sections in the rural areas who are addicted to this drink- Accordingly in the current year Government have banned the sale of toddy in the following areas.—

i) In the entire districts of Kodagu and Bidar,

ii) Koppa, Narashimarapur. Sringeri taluks of Chickmangalur District.

iii) Kalghatgi taluk of Dharwad District.

iv) , Thirthahalli, Sagar, Hosanagara and Shikaripur taluks of Shimoga District.

v) Haliyal, Siddapur, Ankola Sirsi, Mundgod, Supa, Karwar and Yellapur taluks of Uttara Kannada District.

Further Prohibition on the sale of toddy will be extended to the remaining taluks of Chickmagalur and Shimoga District as well as the entire District of Mysore from the Excise Year 1988–89

It is true that a total ban on the sale of toddy is likely to cause hardship to persons engaged in tapping and distribution to toddy. Keeping this in view, the ban is being extended in phases so as to enable thete effeced persons to move to the adjoining districts/ taluks and continue their operations for the time being if they wish to remain in the same trade. Meanwhile the Department of Industries and Social Welfare will be asked to chalk out concrete schemes to help them rehabilitate themselves in course of time, taking alternative trades like rope making, basket making, etc., Efforts will also be made to enable them to avail all assistance under I.R.D.P. and other development schemes as well as bank loans for setting up their own industries.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೆ, ಜನರು ಇದರಲ್ಲಿ ಅಡಿಕ್ಟ್ ಆಗಿ ಬಿಟ್ಟಿದ್ದಾರೆ. ಅವರ ಆರೋಗ್ಯವನ್ನು ಕಾಪಾಡಲು ಸರ್ಕಾರವು ಕ್ರಮ ತೆಗೆದುಕೊಂಡಿದೆ ಎಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಜನರ ಆರೋಗ್ಯವು ಸೇಂದಿಯಿಂದ ಹಾಳಾಗುತ್ತಿಲ್ಲ. ಆದರೆ ಅಡಲ್ಟ್ರೇಷನ್‌ನಿಂದ ಜನರ ಆರೋಗ್ಯ ಹಾಳಾಗುತ್ತಿದೆ. It is a State Patronised adulteration. ಸರ್ಕಾರಕ್ಕೆ ಗೊತ್ತಿಲ್ಲದೆ ಅಡಲ್ಟ್ರೇಷನ್ ಆಗುತ್ತಿಲ್ಲ. ಸೇಂದಿಯಲ್ಲಿ ಕ್ಲೋರಲ್ ಹೈಡ್ರೇಟ್ ಸೇರಿಸಿ ಅಡಲ್ಟ್ರೇಷನ್ ಆಗುತ್ತಿದೆ. ಇದು ಸರ್ಕಾರಕ್ಕೆ ಗೊತ್ತಿದ್ದರೂ ಕೂಡ, ಆದಾಯ ದೃಷ್ಟಿಯಿಂದ.....

ಅಧ್ಯಕ್ಷರು.—ಒಂದು ನಿಮಿಷ. ಮಾನ್ಯ ಮುಖ್ಯಮಂತ್ರಿಗಳು ಏನೋ ಹೇಳುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—State Patronised adulteration ಅಂದರೆ ಏನು ಅರ್ಥ? ಅದರ ಇಂಪ್ಲಿಕೇಷನ್ ಬಗ್ಗೆ ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—State Patronise adulteration ಇದರ ಅರ್ಥ ಏನೆಂದರೆ, ಸೇಂದಿ ವಾರಾಟದಿಂದ ಸರ್ಕಾರಕ್ಕೆ ಹಣ ಬರಬೇಕು ಎನ್ನುವ ದೃಷ್ಟಿಯಿಂದ ಅಡಲ್ಟ್ರೇಷನ್ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳದೆ ಆಗಿನಿಂದ ಈಗಿನವರೆಗೂ ಮೌನ ತಾಳಿಕೊಂಡು ಬಂದಿದ್ದೀರಿ ಇದು State Patronised adulteration ಅಲ್ಲದೆ ಇನ್ನು ಏನು ?

ಶ್ರೀ ರಾಮಕೃಷ್ಣ ಹೆಗಡೆ.—ಹಾಗಿದ್ದರೆ ನಿಮ್ಮ ಸರ್ಕಾರ ಇದ್ದಾಗ, ಅಮೃತ ಕೊಡುತ್ತಿದ್ದರಾ ?

ಶ್ರೀ ಕೆ. ಹೆಚ್. ಶ್ರೀನಿವಾಸ್.— ನಿಮ್ಮ ಸರ್ಕಾರ ಮಾತ್ರವಲ್ಲ. ಹಿಂದಿನ ಸರ್ಕಾರಗಳ ಬಗ್ಗೆಯೂ ನಾನು ಹೇಳುತ್ತಿದ್ದೇನೆ. Unfortuntely you were not present here when these matters were discussed elaborately, when your Minister himself has admitted that. ನಾನೇನಾದರೂ, ವೈಯಕ್ತಿಕವಾಗಿ ಅವರ ಮೇಲೆ ಆಪಾದನೆ ಮಾಡಿದ್ದೀನೆ. ಅವರು ಸಿಟ್ಟು ಮಾಡಿಕೊಳ್ಳುವುದು ಸರಿ. ಈ ವಿಷಯ ಈ ಸದನದಲ್ಲಿ ಎಷ್ಟೋ ಸಲ ಚರ್ಚೆಯಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.— ವೈಯಕ್ತಿಕ ಆರೋಪದ ಪ್ರಶ್ನೆಯಲ್ಲ. as a Member of this House you must speak with some responsibility. ನೀವು ಮತ್ತು ಸುಬ್ಬಯ್ಯ ಇಬ್ಬರು ಒಂದೇನಾ ?

(ಮುಂದುವರಿಯಲಿ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅದು ಬೇರೆ ವಿಚಾರ. ಅದು ಇರಲಿ.

(ಗೊಂದಲ)

ಅಧ್ಯಕ್ಷರು.—ನೀವು ಕ್ಲಾರಿಫಿಕೇಶನ್ ಕೇಳಿಬಿಡಿ.

SRI K. H. SRINIVAS,—I have used thar phrase with all sense o responsibility. It is not an irresponsible allegation against any Government.

SRI RAMAKRISHNA HEGDE.—If you were to say that the State is guilty of tolerating this or the State was unable or the Government was unable to check it, I would have agreed. ನಾನು ಒಪ್ಪುತ್ತೇನೆ. ಆದರೆ ಇಷ್ಟು ಇಂಗ್ಲೀಷ್ ತಮಗೆ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಸ್ಟೇಟ್ ಪ್ಯಾಟ್ರನೈಸ್ಡ್ ಅಂದರೆ ಏನು ಅರ್ಥ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ತಮಗೆ ಏನಾದರೂ ಮ್ಯಾಂಚೇಸ್ಟರ್ ಇಂಗ್ಲೀಷ್‌ನಲ್ಲಿ ಪ್ರೀತಿ ಇದ್ದರೆ ಅದನ್ನು ಟ್ರಾನ್ಸ್‌ಲೇಟ್ ಮಾಡಿಕೊಳ್ಳುವುದಾದರೆ ಅದಕ್ಕೆ ನನ್ನ ಆಭ್ಯಂತರ ಏನೂ ಇಲ್ಲ. ನನಗೆ ಗೊತ್ತಿರುವ ಇಂಗ್ಲೀಷ್‌ನಲ್ಲಿ ಹೇಳಿದ್ದೇನೆ. ಪ್ರಶ್ನೆ ಏನು ಎಂದರೆ ತಾತ್ಪರ್ಯ ಒಂದೇ. ನೀವು ನಯವಾದ ಭಾಷೆಯಲ್ಲಿ ಹೇಳಬಹುದು, ನಾವು ಸ್ವಲ್ಪ ಒರಟಾಗಿ ಹೇಳಬಹುದು. ಆದರೆ ವಿಷಯ. ಇಲ್ಲಿ ವ್ಯತ್ಯಾಸ ಆಗುವುದಿಲ್ಲ. ಸ್ಟೇಟ್ ಪ್ಯಾಟ್ರನೈಸ್ ಎಂದರೆ ಏನು ? ಸರ್ಕಾರ ಗೊತ್ತಿದ್ದರೂ ಕೂಡ ಕಣ್ಣುಮುಚ್ಚಿಕೊಂಡು ಪ್ಯಾಟ್ರನೈಸ್ ಮಾಡುತ್ತದೆ ಎಂದು ಅರ್ಥ. ಕ್ಲೋರಲ್ ಹೈಡ್ರೇಟ್ ಸೇರಿಸುತ್ತಾರೆ ಎನ್ನುತಕ್ಕದ್ದು ಸರ್ಕಾರಕ್ಕೆ ಗೊತ್ತಿದೆ. ಮಂಗಳೂರಿನ ಲ್ಯಾಬೋರೇಟರಿಯಲ್ಲಿ ಟೆಸ್ಟ್ ಮಾಡಿದರೆ ಸ್ಯಾಂಪಲ್ ಕರೆಕ್ಟ್ ಆಗಿ ಇರುತ್ತದೆ, ಅಡಲ್ಟರೇಶನ್ ಏನೂ ಇಲ್ಲ ಎಂದು ಇರುತ್ತದೆ. ಆದೇ ಬೆಂಗಳೂರಿಗೆ ತೆಗೆದುಕೊಂಡು ಬಂದು ಟೆಸ್ಟ್ ಮಾಡಿದರೆ ಆದೇ ಸ್ಯಾಂಪಲ್ ಅಡಲ್ಟ್ರೇಟೆಡ್ ಎಂದು ಗೊತ್ತಾದರೂ ಕೂಡ ಸಂಬಂಧಪಟ್ಟವರ ಮೇಲೆ ಕೇಸ್‌ಗಳನ್ನು ಹಾಕಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಇದು ಗೊತ್ತಾದರೂ ಕೂಡ ಎಲ್ಲಿ ಕಂಟ್ರಾಕ್ಟರ್ಸ್‌ಗೆ ಹೊಡತ ಬೀಳುತ್ತದೋ ಎಂದು ಸುಮ್ಮನಿರುತ್ತಾರೆ. ಒಂದು ವೇಳೆ ಕ್ರಮ ತೆಗೆದುಕೊಂಡರೆ ನಮಗೆ ಇನ್‌ಕಮ್ ಬರುವುದಿಲ್ಲ ಎನ್ನುವ ದೃಷ್ಟಿಯಿಂದ ಸರ್ಕಾರದವರು ಮೌನ ತಳೆದಿದ್ದಾರೆ. ಈ ಶಬ್ದ ಉಪಯೋಗಿಸದೆ ಕಡಿಮೆ ಶಬ್ದ ಉಪಯೋಗಿಸಿಕೊಳ್ಳುವುದಕ್ಕೆ ನನ್ನ ಆಭ್ಯಂತರ ಇಲ್ಲ. ಆದರೆ ಇದರ ತಾತ್ಪರ್ಯವನ್ನು ಮಾತ್ರ ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಇದೆಲ್ಲ ಗೊತ್ತಿಲ್ಲದೆ ದಿಢೀರ್ ಆಗಿ ಮಾಡುವುದು ಅಲ್ಲ. ಆದರೆ ಇದುವರೆಗೂ ಅಡಲ್ಟ್ರೇಶನ್ ಅನ್ನು ಚೆಕ್ ಮಾಡುವುದಕ್ಕೆ ಯಾವುದೇ ಪ್ರಯತ್ನ ಮಾಡದೆ ಇದ್ದಕ್ಕಿದ್ದಾಗೆ ಸೇಂದಿ ವಹಾರಾಟವನ್ನು ನಿಲ್ಲಿಸಿದಿರಿ. ಈಗ ಏನು ಮಾಡುತ್ತೀರಿ ? ಸೇಂದಿ ಇರುವ ಮರಗಳನ್ನು ಏನು ಮಾಡುತ್ತೀರಿ ? ಅವಟ ಸೇಂದಿ ಎಷ್ಟೋ ಸಿಗುತ್ತದೆ. ಅದನ್ನು ಏನು ಮಾಡುತ್ತೀರಿ ? ಏನು ಮಾಡುತ್ತೀರೋ ಗೊತ್ತಿಲ್ಲ. ತಕ್ಷಣ ನಿಲ್ಲಿಸಿದ್ದೀರಿ. ಇವರೆಲ್ಲ ಬೇರೆ ಕಡೆಗೆ ಹೋಗಬಹುದು ಎಂದು ಹೇಳುತ್ತೀರಿ. ಹೀಗೆ ಮಾಡುವುದರಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಎಂಟು ಸಾವಿರ ಜನ ನಿರುದ್ಯೋಗಿಗಳಾಗುತ್ತಾರೆ. ಅವರು ಪಕ್ಕದ ಜಿಲ್ಲೆಗೆ ಹೋಗಬೇಕು ಎಂದರೆ ಅಲ್ಲಿ ಇದೇ ಕೆಲಸ ಮಾಡುವವರು ಇದ್ದಾರೆ. ಆದ್ದರಿಂದ ಅವರು ಅಲ್ಲಿಗೆ ಹೋಗುವುದಕ್ಕೆ ಆಗುವುದಿಲ್ಲ. ಇದಕ್ಕೆ ತಾವು ಸೂಚಿಸಿರುವ ಪರಿಹಾರ ಕಾರ್ಯಸಾಧುವಾದದ್ದು ಅಲ್ಲ. ಇದನ್ನು ನಿಲ್ಲಿಸಿಬಿಟ್ಟು ಈಗ ಸೇಂದಿ ಕುಡಿಯುವ ಜನಕ್ಕೆ ಏನು ಕೊಡುತ್ತೀರಿ ? ತಕ್ಷಣಕ್ಕೆ ಅವರೇನು ಕಳ್ಳಬಟ್ಟಿ ಕುಡಿಯಬೇಕಾ ? ಆದಕ್ಕೋಸ್ಕರ ಇದರ ಬಗ್ಗೆ ಸಮಗ್ರ ಪರಿಶೀಲನೆ ಆಗಬೇಕೆಂದು ನಿರ್ಣಯವನ್ನು ತಂದು ಈ ಸಭೆಯಲ್ಲಿ ನಾನು ಮಾತನಾಡಿದ್ದೇನೆ. ಅದ್ಯಾವುದನ್ನೂ ಕೂಡ ನೀವು ಮಾಡದೆ ಯಾವ್ಯಾವುದು ಅನುಕೂಲವಾಗುತ್ತದೆ ಅಂತಹ ನೀತಿಯನ್ನು ಅನುಸರಿಸಿಕೊಂಡು ಹೋಗುವುದರಿಂದ ಪ್ರಯೋಜನ ಆಗುವುದಿಲ್ಲ. ಆದ್ದರಿಂದ ದಯವಿಟ್ಟು ಎಂಟು ಸಾವಿರ ಜನಕ್ಕೆ ಉದ್ಯೋಗ ವ್ಯವಸ್ಥೆ ಆಗುವ ಬಗ್ಗೆ ಸರ್ಕಾರ ಜವಾಬ್ದಾರಿಯಿಂದ ಉತ್ತರ ಹೇಳಬೇಕು. ಪ್ರಾಸ್ಪೇಟ್ ಹೆಣೆಯುವುದು ಮತ್ತೊಂದು ಮಾಡುವುದು ಯಾವ ಕಾಲಕ್ಕೆ ಆಗುವುದು ? ಇವತ್ತಿನ ದುಡಿಮೆ ಮಾಡಿಕೊಂಡು ಬದುಕತಕ್ಕಂಥ ಜನ ಅವರು ಇರಬೇಕಾದರೆ ಯಾವುದೋ ಒಂದು ದಿವಸ

ಸ್ಕೀಮ್ ಮಾಡುತ್ತೇವೆ. ಪಕ್ಕದ ಜಿಲ್ಲೆಗೆ ಹೋಗಿರಿ ಎಂದರೆ, ಅಲ್ಲಿಯವರಿಗೂ ಇಂದಲ್ಲ ಇನ್ನು ಮೂರು ತಿಂಗಳಲ್ಲಿ ಇದೇ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಬಹಳ ಜವಾಬ್ದಾರಿಯಿಂದ ಅವರ ಜೀವನದ ಬಗ್ಗೆ ಉತ್ತರ ಹೇಳಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಡಿ. ಬಿ. ಇನಾಂದಾರ್.—ಶಿವಮೊಗ್ಗ ಜಿಲ್ಲೆಯ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಈಗಾಗಲೇ ಈ ವರ್ಷ ಸೊರಬ ತಾಲೂಕು, ತೀರ್ಥಹಳ್ಳಿ ತಾಲ್ಲೂಕು, ಸಾಗರ, ಹೊಸನಗರ, ಶಿಕಾರಿಪುರ ಇಲ್ಲಿ ನಾವು ಶೇಂದಿ ಮಾರಾಟವನ್ನು ಮಾಡುತ್ತಿಲ್ಲ. ಇದನ್ನು ನಾವು ವಿಸ್ತರಣೆ ಮಾಡಿ ಈ ವರ್ಷ ಪೂರ್ತಿಯಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಶೇಂದಿ ಮಾರಾಟವನ್ನು ನಿಷೇಧ ಮಾಡಿದ್ದೇವೆ. ಹೋದ ವರ್ಷ ಈ ಐದು ತಾಲ್ಲೂಕುಗಳಲ್ಲಿ ಬಂದ್ ಮಾಡಿದರೂ ಕೂಡ ಅಲ್ಲಿಯ ಜನರಿಗೆ ಏನೂ ತೊಂದರೆ ಬರಲಿಲ್ಲ. ಬೇರೆ ಬೇರೆ ಉದ್ಯೋಗಗಳನ್ನು ಅವರು ಮಾಡುತ್ತಿದ್ದರು. ನಿನ್ನೆ ಆನೆ ಶ್ರೀ ಯಡಿಯೂರಪ್ಪನವರು ಒಂದು ಪ್ರಶ್ನೆಯನ್ನು ಕೇಳಿದ್ದರು. ಎಲ್ಲೆಲ್ಲಿ ಶೇಂದಿ ಮಾರಾಟವನ್ನು ಬ್ಯಾನ್ ಮಾಡಿದ್ದೇವೆ ಅಲ್ಲಿ ಟ್ಯಾಪರ್ಸ್, ರೋಪ್ ಮೇಕಿಂಗ್, ಬಾಸ್ಕೆಟ್ ಮೇಕಿಂಗ್‌ಗೆ ಗಿರಿಗಳನ್ನು ಕಡಿಯುವುದಕ್ಕೆ ಪರ್ಮಿಶನ್ ಕೊಡಬೇಕೆಂದು ಡೆಪ್ಯುಟಿ ಕಮಿಷನರ್‌ಗೆ ಹೇಳಿದ್ದೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೇ, ಬಾಸ್ಕೆಟ್ ವೀವಿಂಗ್ ಮಾಡುವ ಮೇಧಾರರಿಗೆ ಬೇಕಾಗಿರತಕ್ಕಂಥ ಕಚ್ಚಾ ಮಾಲು ಸರಬರಾಜು ಆಗುತ್ತಿಲ್ಲ. ಅವರಿಗೆ ಮುಖ್ಯವಾಗಿ ಬೊಂಬು ಬೇಕು ಡೆಪ್ಯುಟಿ ಕಮಿಷನರ್ ಅವರು ಎಲ್ಲಿಂದ ತಂದು ಕೊಡುತ್ತಾರೆ ? ಫಾರೆಸ್ಟ್ ಡಿಪಾರ್ಟ್‌ಮೆಂಟನವರು ಬೊಂಬು ಇಲ್ಲವೆಂದು ಉತ್ತರ ಹೇಳುತ್ತಾರೆ.

ಇದೇ ಕಾರಣದಿಂದ ಸಾವಿರಾರು ಜನ ಬೆಂಗಳೂರು ಚಲೋ ಕಾರ್ಯಕ್ರಮ ಹಾಕಿಕೊಂಡು ಇಲ್ಲಿಗೆ ಬರುತ್ತಿದ್ದಾರೆ. ಎಷ್ಟೋ ಸಾವಿರ ಜನಕ್ಕೆ ಒಂದೇಸಾರಿ ಹೊಟ್ಟೆಮೇಲೆ ಹೊಡೆದರೆ ಅವರ ಗತಿ ಏನು? ಏನಾದರೂ ಆಲ್ಟರ್‌ನೇಟ್ ಪ್ಲಾನ್ ಮಾಡಿ, ಇಂಪ್ಲಿಮೆಂಟ್ ಮಾಡುವುದಕ್ಕೆ ನಮ್ಮ ಅಭ್ಯಂತರ ಇಲ್ಲ.

ಶ್ರೀ ಬಿ. ರಾಚಯ್ಯ.—ಅಡಲ್ಟರೇಷನ್ ಗೊತ್ತಿದ್ದರೂ ಸರ್ಕಾರ ಕಣ್ಣುಮುಚ್ಚಿಕೊಂಡಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಈಗ ಅವರೇ ಅಡಲ್ಟರೇಷನ್‌ನ್ನು ಪ್ರಾಟ್ರನೈಸ್ ಮಾಡುತ್ತಾರೆಂದು ಹೇಳಲೇ. ಆಗುತ್ತಿದ್ದುದನ್ನು ನಿಲ್ಲಿಸಿದರೆ ಸ್ವಲ್ಪ ಸಮಾಧಾನಪಡುವುದು ಬೇಡವೇ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀವು ಯಾವುದನ್ನು, ಯಾವುದಕ್ಕೋ ಕನ್‌ಫ್ಯೂಸ್ ಮಾಡುತ್ತಿದ್ದೀರಿ. ಇದು ಪ್ರಾಹಿಬಿಷನ್ ಅಲ್ಲ

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ. ಈ ಸೇಂದಿಯನ್ನು ಅಬಾಲಿಷ್ ಮಾಡುವ ಮೊದಲು, ಇಂತಹ ಕೆಲಸವನ್ನು ಕೊಡುತ್ತೇವೆ ಎಂಬ ಬಗ್ಗೆ ಒಂದು ಯೋಜನೆಯನ್ನು ಮಾಡಿ ಆ ಕೆಲಸವನ್ನು ಕೊಟ್ಟಮೇಲೆ, ಈ ರೀತಿಯ ಕ್ರಮ ಕೈಗೊಳ್ಳಬೇಕು. ಕೊಡಗಿನಲ್ಲಿ ಈಗ್ಗೆ ಎರಡು ವರ್ಷದ ಹಿಂದೆ ಈ ರೀತಿ ಮಾಡಿದರು. ಇವತ್ತಿನವರೆಗೂ ಅಲ್ಲಿಯ ಜನಗಳಿಗೆ ಕೆಲಸ ಕೊಟ್ಟಿಲ್ಲ, ಕೊಡುವ ಸಾಧ್ಯತೆಯೂ ಇಲ್ಲ. ಅವರು ಬಿದಿರು ಕೆಲಸ ಮಾಡುವುದಕ್ಕಿದ್ದರೂ ಸಹ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಬಿದಿರು ಕೊಡುತ್ತಿಲ್ಲ. ಇದರಿಂದ ಸುಮಾರು ೨೫ ಸಾವಿರ ಜನ ನಿರುದ್ಯೋಗಿಗಳಾಗಿದ್ದಾರೆ. ಇದರಿಂದ ನಿರುದ್ಯೋಗಿಗಳನ್ನು ಯಾವರೀತಿ ನಿರ್ಮಾಣ ಮಾಡುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ. ಇಮ್ಮೀಡಿಯಟ್ ಆಗಿ, ಆಲ್ಟರ್‌ನೇಟ್ ಪ್ಲಾನ್ ಮಾಡಿ, ಯಾವುದಾದರೂ ಕೆಲಸ ಕೊಟ್ಟರೆ ಮಾತ್ರ, ಅವರು ಮತ್ತು ಅವರ ಮಕ್ಕಳು ಜೀವನ ಮಾಡುತ್ತಾರೆ. ಅವರೂ ಎಲ್ಲಿಯೂ ವಲಸೆ ಹೋಗುವಂತಿಲ್ಲ, ಹೋಗುವದಕ್ಕೆ ಸಾಧ್ಯವೂ ಇಲ್ಲ. ಅದೇ ಊರಿನಲ್ಲಿಯೇ ಕೂಡಲೇ ಬೇರೆ ಆಲ್ಟರ್‌ನೇಟ್ ಕೆಲಸ ಮಾಡಿಕೊಡಬೇಕು. ಆನಂತರ ಇದನ್ನು ಅಬಾಲಿಷ್ ಮಾಡಬೇಕು. ಮಾನ್ಯ ವೀರೇಂದ್ರಪಾಟೀಲರು ಚೀಫ್ ಮಿನಿಸ್ಟರ್ ಆಗಿದ್ದ ಕಾಲದಲ್ಲಿ, ಈಚಲು ಮರ ಬೆಳೆಸಲು ಸಬ್ಸಿಡಿ ಮತ್ತು ೨-೩ ಎಕರೆ ಜಾಗ ಕೊಟ್ಟರು. ಈಗ ತಾವು ಮುಖ್ಯಮಂತ್ರಿಗಳಾಗಿದ್ದೀರಿ. ಸುಬ್ಬಯ್ಯನವರು ಬಂದಕೂಡಲೇ ಅವರ ಹೆಸರನ್ನು ಹೇಳುತ್ತೀರಿ, ನಿಮಗೇನು ಅವರನ್ನು ಕಂಡರೆ ಭಯವೇ ? ಇಷ್ಟರವರೆಗೆ ಹೇಳಲಿಲ್ಲ, ಈಗ ಹೇಳುತ್ತಿದ್ದೀರಿ.....

ಶ್ರೀ ಎಂ. ರಘುಪತಿ.—ಯಾರಿಗಾದರೂ ಭಯ ಇದ್ದರೆ, ಅದು ನಿಮಗೆ. ಮೊದಲು ನಿಮ್ಮ ಕುರ್ಚಿಗೇ ಬರುವುದು.....

ಶ್ರೀ ಡಿ. ಬಿ. ಇನಾಂದಾರ್.—ಇವತ್ತು ಸಾವಿರಾರು ಜನ ಅಲ್ಲಿ, ಎಷ್ಟೋ ಜನ ನಿರುದ್ಯೋಗಿಗಳಾಗಲೀ, ಅದರ ಬಗ್ಗೆ ಒಂದು ಸಮಗ್ರವಾದ ಯೋಜನೆಯನ್ನು ಮಾಡುತ್ತಿದ್ದೇವೆ.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಇವತ್ತು ಆವರಿಗೊಳ್ಳುತ್ತಾರೆ. ಪ್ರಾಫಿಕ್ ಆಗಿ ಇಂತಹ ಸ್ಕೀಮ್ ಮಾಡುತ್ತಿದ್ದೇವೆ ಎನ್ನುವುದು ಬೇಕಲ್ಲ. ವಿಶಿಷ್ಟವಾದ ಯೋಜನೆಯನ್ನು ಮಾಡಿರುತ್ತಿದ್ದೇವೆ ಎನ್ನುವುದು ಬೇಕು.

ಶ್ರೀ ಡಿ. ಬಿ. ಇನಾಂದಾರ್.—ಇದರಲ್ಲಿ ಮುಖ್ಯವಾದ ಉದ್ದೇಶ, ಮಾನ್ಯ ಶ್ರೀನಿವಾಸ್‌ರವರು ,it is being winked at' ಇದನ್ನು ಮಾಡಬಾರದು ಎನ್ನುವ ಉದ್ದೇಶದಿಂದ ಫೇಸ್ ಔಟ್ ಮಾಡಬೇಕು ಎಂದು ಹೇಳಿದರು. People are addicted to adulterated toddy. We are going to extend this provision to the entire State in a phased manner. ಇದನ್ನು ತೆಗೆಯಬೇಕೆನ್ನುವ ನಿರ್ಧಾರವನ್ನು ತೆಗೆದುಕೊಂಡು ಕೆಲವು ಕಡೆಗಳಲ್ಲಿ ಮಾಡಿದ್ದೇವೆ.....

(ಗೊಂದಲ)

ಶ್ರೀ ಗೋಪಾಲ ಮುಕ್ಕುಂದ ಕಾನಡೆ.—ನನಗೆ ನಿರ್ದಿಷ್ಟವಾದ ಉತ್ತರ ಬೇಕು. ಗಾಳಿ ಮಾತು ಬೇಡ. ನಿರ್ದಿಷ್ಟವಾದ ಯೋಜನೆ ಏನೆಂದು ಹೇಳಬೇಕು.....

(ಗೊಂದಲ)

ಅಧ್ಯಕ್ಷರು.—ಇದು ಸರಿಯಲ್ಲ, ಶ್ರೀನಿವಾಸ್‌ರವರೇ ಇನ್ನೊಮ್ಮೆ ಕೇಳಿ.....

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಈಗ ಕರ್ನಾಟಕ ರಾಜ್ಯದಲ್ಲಿ ಇರತಕ್ಕ ಎಲ್ಲಾ ಭಾಗಗಳಲ್ಲಿಯೂ ಅಡಲ್ಟ್‌ರೇಷನ್ ಇದೆ. ಸೀಂದಿ ಒಂದೇ ಅಲ್ಲ. ಅರ್ಯಾಕ್‌ನಲ್ಲೂ ಅಡಲ್ಟ್‌ರೇಷನ್ ಇದೆ, ಇಂಡಿಯನ್ ಮೇಡ್ ಫಾರಿನ್ ಲಿಕ್ಕರ್‌ನಲ್ಲಿಯೂ ಕೂಡ ಅಡಲ್ಟ್‌ರೇಷನ್ ಇದೆ. There are different methods of adulteration. Even I. M. F. L., when it is under proof, that is adulteration. ಅಡಲ್ಟ್‌ರೇಷನ್ ಇಲ್ಲದೇ ಇರುವುದು ಯಾವುದೂ ಇಲ್ಲ. ನಮ್ಮ ದೇಶದಲ್ಲಿರುವುದು ಎರಡೇ ಎರಡು. ಒಂದು ಪಾಸಗಿ ಕಳ್ಳಭಟ್ಟಿ, ಇನ್ನೊಂದು ಸರಕಾರಿ ಕಳ್ಳಭಟ್ಟಿ, ಇದನ್ನು ಬಿಟ್ಟರೆ ಮತ್ತೇನೂ ಇಲ್ಲ. ಈಗ ೨೪-೨೫ ಸಾವಿರ ಜನಗಳು ನಿರುದ್ಯೋಗಿಗಳಾಗಿರುತ್ತಾರೆ. ಅವರು ದಿನದಿನ ಕೂಲಿ ಮಾಡಿಕೊಂಡು ಬದುಕತಕ್ಕ ಜನ. ಅವರಿಗೆ ನಾಲ್ಕು ದಿನ ತಡೆದುಕೊಳ್ಳುವ ಶಕ್ತಿ ಇಲ್ಲ. ಮಾರನೆ ದಿವಸವೇ ಅವರು ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಹೊರಡಬೇಕಾಗುತ್ತದೆ. ನೀವು ಅವರಿಗೆ ರೋಪ್‌ವೇ ಕೆಂಗಲ್ ಬಾಸ್ಕೆಟ್ ವೀವಿಂಗ್ ಕೆಲಸದ ವ್ಯವಸ್ಥೆ ಮಾಡುತ್ತೇವೆಂದರೆ, ಇದರಿಂದ ಅವರು ಹೊಟ್ಟೆಹೊರೆಯುವುದಕ್ಕೆ ಆಗುವುದಿಲ್ಲ. Unless the Government makes some alternative arrangements for them, this should not be implemented. They must first ensure some employment to them and then implement this if the Government has any responsibility for these people. ಇಲ್ಲದೇ ಹೋದರೆ ಹೇಗೆ ಆಗುತ್ತದೆ. ರೋಪ್ ವೇ ಕೆಂಗಲ್‌ನಿಂದ ಹೊಟ್ಟೆಹೊರೆಯುವುದಕ್ಕೆ ಆಗುತ್ತದೆಯೆ ?

ಶ್ರೀ ಡಿ. ಎ. ಚಿನ್ನಪ್ಪ.—ಅಧ್ಯಕ್ಷರೇ.....

(ಗೊಂದಲ)

ಅಧ್ಯಕ್ಷರು.—ನೀವು ಕುಳಿತುಕೊಳ್ಳಿರಿ. ರೂಲ್ಸ್ ರೆಗ್ಯುಲೇಷನ್ ಬಿಟ್ಟು ಮಾತನಾಡಿದರೆ ಹೊರಗೆ ಕಳುಹಿಸಬೇಕಾಗುತ್ತದೆ.

SRI P. B. INAMDAR.—These people were employed by private contractors. ಇದನ್ನು ಕಂಟ್ರಾಕ್ಟ್ ಕೊಡುತ್ತಿದ್ದೇನೆ. ಕಂಟ್ರಾಕ್ಟರ್ ಟ್ರಾಪರ್ಸ್ ಮೂಲಕ ಮಾಡುತ್ತಿದ್ದಾರೆ ಪೇರಿಯಸ್ ಸಿಸ್ಟಮ್ ಇದೆ. ನಮ್ಮಲ್ಲಿ ಕಾಂಟ್ರಾಕ್ಟ್ ಕೊಡುತ್ತೇವೆ. ಅವರು ಟ್ರಾಪರ್ಸ್‌ನ್ನು ಹೈರ್ ಮಾಡುತ್ತಿದ್ದಾರೆ ಕೆಲವೊಂದು ರಾಜ್ಯದಲ್ಲಿ ಟ್ರಾಪರ್ಸ್ ಸೊಸೈಟಿ ಇರುತ್ತದೆ. ಆಲ್ಲಿ ಬೇರೆ ಬೇರೆ ರೀತಿ ಆಗುತ್ತದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಕ್ಷನ್ ಮಾಡುವ ಪದ್ಧತಿ ಬೇರೆ ಇದೆ. ಉಳಿದ ಜಿಲ್ಲೆಯಲ್ಲಿ, ಉಳಿದ ತಾಲ್ಲೂಕುಗಳಲ್ಲಿ ಬೇರೆ ರೀತಿ ಇದೆ. The health of the people, especially the weaker sections is more important. We are definitely going to make a programme for the unemployed.

ಶ್ರೀ ಪಟಮಕ್ಕಿ ರತ್ನಾಕರ್.—ಅಡಲ್ಟ್ರೇಷನ್ ಮಾಡುವರು ಯಾರು ? ಕಂಟ್ರಾಕ್ಟರ್ಸ್ ಮಾಡುತ್ತಾರೆ. ಕಂಟ್ರಾಕ್ಟರ್ಸ್ ಮಣಿಪದ ತಪ್ಪಿಗೆ ನೀವು ಯಾರಿಗೆ ಶಿಕ್ಷೆ ಕೊಡುತ್ತಿದ್ದೀರಿ ?

(ಗೊಂದಲ)

ಅಧ್ಯಕ್ಷರು.—ಇದಕ್ಕೆ ಉತ್ತರ ಕೊಡುವುದು ಬೇಕಾಗಿಲ್ಲ, ಇದ್ದ ಆಗುವುದಿಲ್ಲ. ಕಾಲಿಂಗ್ ಅಟೆನ್‌ಷನ್‌ನಲ್ಲಿ ನಿಮ್ಮ ಹೆಸರು ಇಲ್ಲ. ನಿಮಗೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ಡಿಮ್ಯಾಂಡ್ ಮೇಲೆ ಮಾತನಾಡಿ. ಈಗ ಆಗುವುದಿಲ್ಲ.

ಶ್ರೀ ಪಟಮಕ್ಕಿ ರತ್ನಾಕರ್.—ಕಂಟ್ರಾಕ್ಟರ್ಸ್ ಅಡಲ್ಟ್ರೇಷನ್ ಮಾಡಿದರೆ ಹೆಂಡ ಇಳಿಸಿಕೊಂಡು ಜೀವನ ಮಾಡುವವರಿಗೆ ಉದ್ಯೋಗ ಇಲ್ಲದಂತೆ ಮಾಡುತ್ತಿದ್ದೀರಿ, ಇದು ಸರಿಯೇ ?

(ಗೊಂದಲ)

ಅಧ್ಯಕ್ಷರು.—ಸ್ವಾಮಿರಾವ್, ರತ್ನಾಕರ್, ಇವರಿಬ್ಬರೂ ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಏನು ಮಾತನಾಡಿದರೂ ಅದನ್ನು ಎಕ್ಸ್‌ಪಂಜ್ ಮಾಡಲಾಗುತ್ತದೆ. This matter has been closed. ನಿಮಗೆ ಡಿಮ್ಯಾಂಡ್ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಆಗ ಮಾತನಾಡಿ. ಈಗ ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ನೀಲಕಂಠಪ್ಪನವರೇ ನಿಮ್ಮ ನೋಟೀಸ್ ಬಗ್ಗೆ ಸರ್ಕಾರದ ಗಮನ ಸೆಳೆಯಿರಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಬೋರ್ಡ್‌ನಿಂದ ಇವರಿಗೆ ಏನಾದರೂ ಅರೇಂಜ್‌ಮೆಂಟ್ ಮಾಡಿ. ಅಲ್ಲಿ ನೀರಾ ಎಂದು ಮಾಡುತ್ತಾರೆ. ಜಿಲ್ಲೆಗೆ ಹೋದಾಗ ಖಾದಿ ಶಾಪ್‌ನಲ್ಲಿ ಇದನ್ನು ತಾಪ್ಪ ಸೊಂಡಿರಬಹುದು. ನಮ್ಮ ತಪ್ಪಿಗೆ ಗೊತ್ತಿದೆ. ಅದಕ್ಕೆ ಏನಾದರೂ ಯೋಜನೆ ಹಾಕುತ್ತೀರಾ, ಹೇಳಿರಿ.

ಶ್ರೀ ಕೆ. ಪೆಚ್. ಶ್ರೀನಿವಾಸ್.—ಅಡಲ್ಟ್ರೇಷನ್‌ನಿಂದ ಸಾಯುವುದಕ್ಕಿಂತ ಹೆಚ್ಚಾಗಿ ಇವರು ಹೊಟ್ಟೆಗಿಲ್ಲದೆ ಹೆಚ್ಚು ಜನ ಸತ್ತಹೋಗುತ್ತಾರೆ.

ಶ್ರೀ ಡಿ. ಬಿ. ಇನಾಮ್‌ದಾರ್.—ವೀಕರ್ ಸೆಕ್ಷನ್ಸ್ ಆರೋಗ್ಯದ ಬಗ್ಗೆ ನಮಗೆ ಅನುಕಂಪ ಇದೆ. ಅದನ್ನು ಪ್ರೊಟೆಕ್ಟ್ ಮಾಡುವದೃಷ್ಟಿಯಿಂದ this Government has taken a decision to ban toddy. ಅದೇ ರೀತಿ ಯಾರು ಅನ್ ಎಂಪ್ಲಾಯ್ಡ್ ಇರುತ್ತಾರೆ, ಅವರ ಬಗ್ಗೆ ಯೋಜನೆ ಮಾಡಿ ಎಂಪ್ಲಾಯ್‌ಮೆಂಟ್ ಕೊಡುವ ವ್ಯವಸ್ಥೆ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು.—ಬಿ. ಸೋಮಶೇಖರರವರೇ, ನೀಲಕಂಠಪ್ಪನವರಿಗೆ ಉತ್ತರ ಕೊಡಿರಿ.

(ಗೊಂದಲ)

ಅಧ್ಯಕ್ಷರು.—ಈ ರೀತಿ ಗಲಾಟೆ ಮಾಡುವುದು ಸರಿಯಲ್ಲ. ಗೌರ್ನಮೆಂಟ್‌ನವರು ಉತ್ತರ ಕೊಟ್ಟಿದ್ದಾರೆ. ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಆಗುವುದಿಲ್ಲ ತಾವೆಲ್ಲ ದಯವಿಟ್ಟು ಕೂಡಿರಿ. **ಶ್ರೀನಿವಾಸ್**‌ರವರೇ ಅವರೇನೋ ಪೂಸಬರಿದ್ದಾರೆ, ನೀವೂ ಹೂಸಬರೇ ?

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದನ್ನು ದಯವಿಟ್ಟು ಅವರಂ ಪ್ರತಿಷ್ಠೆಯ ಪ್ರಶ್ನೆಯಾಗಿ ತಗೆದುಕೊಂಡರೆ ಆಗುವುದಿಲ್ಲ.

ಅಧ್ಯಕ್ಷರು.—ಸಂಬಂಧಪಟ್ಟ ಸಚಿವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇವರು ಯೋಜನೆಯನ್ನು ಯಾವತ್ತಾದರೂ ಮಾಡಂತ್ತೇವೆ ಅಂದರೆ ಅಷ್ಟು ಹೊತ್ತಿಗೆ ಇವರೆಲ್ಲರೂ ಸತ್ತುಹೋಗಿರುತ್ತಾರೆ.

ಪಿ.ಪಿ.ಎಂ.

ಅಧ್ಯಕ್ಷರು.—ತಾವೇನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೇ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಈ ಬಗ್ಗೆ ಅವರೇನು ಹೇಳುತ್ತಾರೋ ಕೇಳೋಣ.

ಅಧ್ಯಕ್ಷರು.—ಮೊದಲು ನೀವು ಅವರಿಗೆ ಶಿಸ್ತು ಕಲಿಸಿ. ಆವರು ಆಶಿಸ್ತಿನಿಂದ ಮಾತನಾಡುತ್ತಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ತಮ್ಮ ಮಾತನ್ನು ಯಾರೂ ಮೀರುವುದಿಲ್ಲ.

ಅಧ್ಯಕ್ಷರು.—ಮೊದಲು ಅವರಿಗೆ ಶಿಸ್ತು ಕಲಿಸಬೇಕು. ಇದಕ್ಕೆ ಉತ್ತರ ಅವರ ಬಾಯಿಂದಲೇ ಹೇಳಬೇಕೆಂದು ಕೇಳುತ್ತಿರಾ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹೌದು.

ಶ್ರೀ ರಾಮಕೃಷ್ಣ ನೆಗಡೆ.—ಮಾನ್ಯ ಅಧ್ಯಕ್ಷರೇ, ಸರ್ಕಾರ ಯಾವುದೇ ಒಳ್ಳೆಯ ಕೆಲಸ ಮಾಡಿದರೂ ಕೂಡ ನಮ್ಮ ನೆಮ್ಮ ವಿರೋಧ ಪಕ್ಷದವರಿಂದ ಟೀಕೆ ಮಾಡಿಸಿಕೊಳ್ಳಬೇಕಾಗಿದೆ. ದಲಿತರು, ಅದರಲ್ಲೂ ಮುಖ್ಯವಾಗಿ ದಲಿತ ಸಂಘರ್ಷ ಸಮಿತಿಯವರು ಕಳೆದ ೫ ವರ್ಷಗಳಿಂದ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನೀವು ಹೆಂಡ ಬಂದ್ ಮಾಡಬೇಕು, ಹೆಂಡ ಕುಡಿಸತಕ್ಕಂಥಾದ್ದನ್ನು ನಿಲ್ಲಿಸ ಬೇಕು. ಅದರಲ್ಲಿ ಎಲುಬಿಕ ಇರುತ್ತದೆಂದು ಹೇಳಿದ್ದಾರೆ. ಇದನ್ನು ನಾವು ಒಂದೇ ಸಾರಿ ಮಾಡುವುದಕ್ಕೆ ಬರುವುದಿಲ್ಲ, ಆಮೇಲೆ ಎಲುಬಿರಕೆ ಯಾವುದರಲ್ಲಿದೆ ಯಾವುದರಲ್ಲಿಲ್ಲ ಎನ್ನುವ ಜಿಜ್ಞಾಸೆಗೆ ನಾನು ಹೋಗುವುದಿಲ್ಲ, ಆ ಬಗ್ಗೆ ಮಾನ್ಯ ಶ್ರೀನಿವಾಸ್‌ರವರೇ ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಅವರ ದೃಷ್ಟಿಯಲ್ಲಿ ಪ್ರಪಂಚದ ಎಲ್ಲಾ ವಸ್ತುಗಳಲ್ಲಿ ಎಲ್ಲಾ ವ್ಯಕ್ತಿಗಳಲ್ಲಿ....

ಶ್ರೀ ಕೆ. ಹೆಚ್. ಶ್ರೀನಿವಾಸ್.—ಪ್ರಪಂಚದಲ್ಲಿ ಎಲ್ಲಾ ಎಂದು ನಾನು ಹೇಳಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಎಲ್ಲಾದರಲ್ಲೂ ಅಡಾಲ್ಟ್‌ರೇಶನ್ ಇದೆ ಎಂದರು. ಆದರೆ ಅವರ ದೃಷ್ಟಿಯಲ್ಲಿರತಕ್ಕಂಥ ಅಡಾಲ್ಟ್‌ರೇಶನ್ ಹೋಗಿಲ್ಲವೆಂದು ನಾನು ಹೇಳುತ್ತೇನೆ. ಅದು ಮೊದಲು ಹೋಗಲಿ. ನಾವು ಹರಿಜನ ಮತ್ತು ಗಿರಿಜನರಿಗೆ ಮತ್ತು ದಲಿತರ ಹಿತದೃಷ್ಟಿಯಿಂದ ಇದನ್ನು ಮಾಡಿದ್ದೇವೆ. ಮಾಡುವಾಗ ಸ್ವಾಭಾವಿಕವಾಗಿ ಇಂತಹ ದಂದೆಯಲ್ಲಿ ತೊಡಗತಕ್ಕಂಥ ಕೆಲವು ಜನರಿಗೆ ಉದ್ಯೋಗ ಹೋಗುತ್ತದೆ. ಇದರ ಬಗ್ಗೆ ಏನು ಮಾಡುತ್ತೇವೆಂದು ಈಗ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ. ಕೆಲವೊಂದು ವಿಚಾರಗಳನ್ನು ಅವರು ಹೇಳಿದರು. ಸಣ್ಣಪುಟ್ಟ ಇಂಡಸ್ಟ್ರಿಗಳನ್ನು ಮಾಡಿ ಕೊಡುತ್ತೇವೆಂದು. ಇದರ ಬಗ್ಗೆ ಯೋಜನೆಯನ್ನು ತಯಾರು ಮಾಡಿದ್ದೇವೆ. ಇಲ್ಲಿಯಂವರೆವಿಗೂ

ನಾವು ಕೊಡಗು ಜಿಲ್ಲೆಯಲ್ಲಿ ಹೆಂಡದವಾರಾಟವನ್ನು ನಿಲ್ಲಿಸಿದ್ದೇವೆ. ಬೀದರ್ ಜಿಲ್ಲೆಯಲ್ಲಿ ನಿಲ್ಲಿಸಿದ್ದೇವೆ. ಕೊಡಗು ಜಿಲ್ಲೆಯಲ್ಲಿ ಈ ಉದ್ಯೋಗದ ಮೇಲೆ ಅವಲಂಬಿಸಿದಂತಹವರು ಬಹಳ ಕಡಿಮೆ ಇದ್ದರು, ಅವರು ಬೇರೆ ಉದ್ಯೋಗ ಕೊಡಿ ಎಂದು ಕೇಳಲಿಲ್ಲ. ಬೀದರ್‌ನಲ್ಲಿ ಅದೇ ರೀತಿಯಾಯಿತು. ನಮ್ಮ ನೀತಿ ಈ ರಾಜ್ಯದಲ್ಲಿ ಹಂತ ಹಂತವಾಗಿ ಈ ಹೆಂಡದ ವಾರಾಟ ಮಾಡತಕ್ಕಂಥಾದ್ದನ್ನು ನಿಲ್ಲಿಸಬೇಕು ಎಂಬುದು, ನಮ್ಮ ನೀತಿ ಇದೇ ರಾಜ್ಯಕ್ಕೆ ಸಂಬಂಧವಿರುವುದರಿಂದ ಇದಕ್ಕೆ ಒಂದು ವ್ಯವಸ್ಥೆ ಮಾಡಬೇಕು. ಈಗ ಅದಕ್ಕೊಂದು ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ. ಇದಕ್ಕೆ ಎಕ್ಸ್‌ಸೈಜ್ ಡಿಪಾರ್ಟ್‌ಮೆಂಟ್ ಮತ್ತು ಇಂಡಸ್ಟ್ರಿ ಡಿಪಾರ್ಟ್‌ಮೆಂಟ್ ಸೇರಿ ಒಂದು ಬದಲಿ ವ್ಯವಸ್ಥೆ ಮಾಡಬೇಕಾಗಿದೆ. ಇವರಿಗೆ ಉದ್ಯೋಗ ಕೊಡತಕ್ಕಂಥಾ ಜವಾಬ್ದಾರಿಯನ್ನು ನಾವು ತೆಗೆದು ಕೊಳ್ಳುತ್ತೇವೆ. ತಾವು ಕಣ್ಣೀರು ಸುರಿಸುವ ಅಗತ್ಯವಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾವು ರಿಲೀಫ್ ಕೊಡಿ ಎಂದು ಮಾತ್ರ ಕೇಳಿದೆವು. ಕಣ್ಣೀರು ಸುರಿಸಲಿಲ್ಲ.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು.—ಚಿನ್ನಪ್ಪನವರೇ ತಾವು ಕೂತುಕೊಳ್ಳಿ. ನೀಲಕಂಠಪ್ಪನವರೇ ತಾವು ಮಾನ್ಯ ಮಂತ್ರಿಗಳ ಗಮನ ಸೆಳೆಯಿರಿ.

2. ಎಸ್, ಎಸ್. ಎಲ್. ಸಿ. ಮಧ್ಯಂತರ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕಾಲೇಜುಗಳಲ್ಲಿ ಪ್ರವೇಶ ಸಿಗದೆ ಅನಾನುಕೂಲ ಆಗಿರುವ ಬಗ್ಗೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ಎಸ್. ಎಸ್. ಎಲ್. ಸಿ ಮಧ್ಯಂತರ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಹೊರ ಬರುವ ವಿದ್ಯಾರ್ಥಿಗಳಿಗೆ ಕಾಲೇಜುಗಳಲ್ಲಿ ಪ್ರವೇಶ ಸಿಗದೆ ಉಂಟಾಗಿರುವ ಅನಾನುಕೂಲಗಳ ಬಗ್ಗೆ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಿ. ಸೋಮಶೇಖರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ,

ಸರ್ಕಾರವು ಆದೇಶ ಸಂಖ್ಯೆ ಇಡಿ ೫೧ ಎಸ್‌ಇಕ್ಯೂಎಂ ೮೭, ದಿನಾಂಕ ೩೦-೯-೧೯೮೭ರಲ್ಲಿ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯನ್ನು ಮಾರ್ಚ್ ತಿಂಗಳಲ್ಲಿ ಮತ್ತು ಸಪ್ಲಿಮೆಂಟರಿ ಪರೀಕ್ಷೆಯನ್ನು ಆಕ್ಟೋಬರ್ ಬದಲಾಗಿ ಜೂನ್ ತಿಂಗಳಿನಲ್ಲಿ ನಡೆಯುವಂತೆ ಆದೇಶಿಸಿದೆ. ಇದರ ಉದ್ದೇಶ ಎಸ್.ಎಸ್.ಎಲ್.ಸಿ. ಮಾರ್ಚ್ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಒಂದು ವರ್ಷ ಶೈಕ್ಷಣಿಕವಾಗಿ ನಷ್ಟ ಉಂಟಾಗಬಾರದೆಂದು ಸಪ್ಲಿಮೆಂಟರಿ ಪರೀಕ್ಷೆಯನ್ನು ಜೂನ್ ತಿಂಗಳಿನಲ್ಲಿ ನಡೆಸಿ, ಆದರಲ್ಲಿ ಪಾಸಾದ ವಿದ್ಯಾರ್ಥಿಗಳು ಅದೇ ಶೈಕ್ಷಣಿಕ ವರ್ಷದಲ್ಲಿ ಪದವಿ ಪೂರ್ವ ತರಗತಿಗಳಿಗೆ ಪ್ರವೇಶ ಪಡೆಯುವಂತೆ ಅನುಕೂಲವಾಗಲೆಂದು ಸರ್ಕಾರವು ತೀರ್ಮಾನಿಸಿದೆ. ಈ ಹಿನ್ನೆಲೆಯಲ್ಲಿ ಮುಂಬರುವ ಜೂನ್ ತಿಂಗಳಿನಲ್ಲಿ ನಡೆಯುವ ಸಪ್ಲಿಮೆಂಟರಿ ಪರೀಕ್ಷೆಯ ಫಲಿತಾಂಶ ಬರುವವರೆಗೆ ಪದವಿ ಪೂರ್ವ ತರಗತಿಗಳಿಗೆ ಕಾಲೇಜುಗಳಲ್ಲಿ ದಾಖಲಾತಿಗಳನ್ನು ಮಾಡಕೂಡದೆಂದೂ ಆಮೆ ಪ್ರವೇಶಗಳಿಗೆ ಅರ್ಜಿಗಳನ್ನು ಸ್ವೀಕರಿಸಬಹುದೆಂದು ಎಲ್ಲಾ ಕಾಲೇಜುಗಳಿಗೆ ನಿರ್ದೇಶನ ನೀಡುವಂತೆ ಪದವಿ ಪೂರ್ವ ಶಿಕ್ಷಣ ನಿರ್ದೇಶಕರಿಗೆ ಸರ್ಕಾರವು ಸಂಖ್ಯೆ ಇಡಿ ೧೧೭ ಟಿಪಿಯು ೮೮ ದಿನಾಂಕ ೧೨-೫-೮೮ರಲ್ಲಿ ಆದೇಶ ನೀಡಿದೆ. ಇದರಂತೆ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ದಿನಾಂಕ ೨೫-೫-೮೮ ರಂದು ಎಲ್ಲಾ ಪದವಿ ಪೂರ್ವ ಕಾಲೇಜುಗಳಿಗೆ ಸುತ್ತೋಲೆಯನ್ನು ಹೊರಡಿಸಿರುತ್ತಾರೆ.

ಶ್ರೀ ಬಿ ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ದಿನಾಂಕ ೧೨-೫-೮೮ ರಂದು ಪದವಿ ಪೂರ್ವ ಶಿಕ್ಷಣ ನಿರ್ದೇಶಕರಿಗೆ ಸರ್ಕಾರವು ಒಂದು ಆದೇಶವನ್ನು ಕಳುಹಿಸಿ, ಅದರಲ್ಲಿ, ಕಾಲೇಜುಗಳಲ್ಲಿ ದಾಖಲಾತಿಗಳನ್ನು ಮಾಡಕೂಡದೆಂದೂ, ಆದರೆ ಪ್ರವೇಶಗಳಿಗೆ ಅರ್ಜಿಗಳನ್ನು ಸ್ವೀಕರಿಸಬಹುದೆಂದು